Spl.C. 3/2020

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಇವರ ನ್ಯಾಯಾಲಯದಲ್ಲಿ.**

**ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ: 3/2020**

| | | | |
|---|---|---|---|
| ಹೆಸರು | : | ಪರಸಪ್ಪ ಕುಳಲಿ | ಫಿರ್ಯಾಸಾ-06 |
| ತಾಯಿಯಹೆಸರು | : | ವೆಂಕಪ್ಪ | ಚಾಸಾ-11 |
| ವಯಸ್ಸು | : | 38 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಕಲ್ಲಳ್ಳಿ, ತಾಃ ಜಮಖಂಡಿ | |

ದಿನಾಂಕಃ 27-09-2023 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ದಿನಾಂಕಃ 29-10-2019 ರಂದು ಡಿ.ಎಸ್.ಪಿ ಸಾಹೇಬರು ನನ್ನನ್ನು ಶಿರೋಳ ಗ್ರಾಮಕ್ಕೆ ಕರೆದುಕೊಂಡು ಹೋದರು. ಜಾಮೀಯಾ ಮಸೀದಿ ಪಕ್ಕದಲ್ಲಿ ಪಂಚನಾಮೆ ಮಾಡಿದರು. ಸಯ್ಯದಸಾಬ ನಬಿಸಾಬ ಗಲಗಲಿ ರವರ ಜಮೀನಿನಲ್ಲಿ ಒಂದು ಪೋಟೋ ಪಡೆದುಕೊಂಡರು. ಅದರ ಸರ್ವೇ ನಂಃ426. ಈಗ ಒಂದು ಪಂಚನಾಮೆ ನೋಡಿದೆ ಅದರ ಮೇಲಿನ ಸಹಿ ನನ್ನದೇ ಇದ್ದು ಅದನ್ನು ನಿಪಿ-36 ಎಂದು, ಅದರ ಮೇಲಿನ ಸಹಿಯನ್ನು ನಿಪಿ-36(ಎ) ಎಂದು ಗುರುತಿಸಲಾಯಿತು. ಈಗ 2 ಪೋಟೋಗಳನ್ನು ನೋಡಿದೆ ಅವುಗಳನ್ನು ನಿಪಿ-37 ಮತ್ತು 38 ಎಂದು ಗುರುತಿಸಲಾಯಿತು. ವಿ.ಸಿ ಯಲ್ಲಿ ನೋಡಿದರ ಆರೋಪಿ-1,14,15 ಇವರನ್ನು ನೋಡಿ ಗುರುತಿಸಿರುವುದಿಲ್ಲ.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್. ವಕೀಲರಿಂದ**

ನನ್ನನ್ನು ಜಾಮಿಯಾ ಮಸೀದಿ ಪಕ್ಕದ ಸೈದುಸಾಬ ಇವರ ಜಮೀನಿಗೆ ಡಿ ವಾಯ ಎಸ ಪಿ ರವರು ಕರೆದುಕೊಂಡು ಹೋಗಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪಂಚನಾಮೆಯನ್ನು ಬರೆಯಲು ನಾನು ಮಾಹಿತಿ ನೀಡಿಲ್ಲ

ಹಾಗೂ ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಹಾಗೂ ಸ್ಥಳದಲ್ಲಿ ಪೋಲಿಸರೆ ನಿಲ್ಲಿಸಿ ಪೋಟೋ ತೆಗೆದಿದ್ದಾರೆ ಯಾವ ವಿಷಯಕ್ಕೆ ನನಗೆ ಗೊತ್ತಿಲ್ಲ. ಅಲ್ಲಿ ಯಾಕೆ ಕರೆದುಕೊಂಡು ಹೋಗಿದ್ದಾರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟ.